# ಊರಿಗೆ ಊರೇ ಗುಳೇ ಹೋಗುವ ಜಾತ್ರೆ!





ಕೂಡ್ಲಿಗಿಯ ವಿಶಿಷ್ಟ ಆಚರಣೆಯ ದೇವತೆ ಗುಳೇ ಲಕ್ಕಮ್ಮ



**ತಾಲೂಕು ಕೇಂದ್ರವಾಗಿರುವ ಕೂಡ್ಲಿಗಿ ಪಟ್ಟಣ ಎಲ್ಲ ಆಧುನಿಕತೆಗಳನ್ನು ಮೈಗೂಡಿಸಿಕೊಂಡಿದ್ದರೂ ಇಂತಹ ಸಾಂಪ್ರದಾಯಿಕ ಆಚರಣೆಗಳನ್ನು ಉಳಿಸಿಕೊಂಡು ಬಂದಿರುವುದೇ ಇಲ್ಲಿನ ವಿಶೇಷ!**

ಚಿತ್ರ– ಲೇಖನ:

**ಸಿದ್ಧರಾಮ ಹಿರೇಮಠ ಕೂಡ್ಲಿಗಿ**



ಇಲ್ಲಿನ ಜಾತ್ರೆಯಲ್ಲಿ ವಿಭಿನ್ನವಾದ ಆಚರಣೆಯಿದೆ. ಎಲ್ಲ ಜಾತ್ರೆಗಳಂತೆ ತೇರಾಗಲಿ, ಉತ್ತತ್ತಿ, ಬಾಳೆಹಣ್ಣು ತೂರುವುದು ಇಲ್ಲಿಲ್ಲ. ಬದಲಿಗೆ ಇಡೀ ಊರಿನ ಜನತೆ ಒಟ್ಟಾಗಿ ಒಂದು ದಿನದ ಮಟ್ಟಿಗೆ ತಮ್ಮ ಮನೆಗಳಿಗೆ ಬೀಗ ಜಡಿದು ಊರು ಬಿಡುತ್ತಾರೆ!

ಹೀಗೆ ಇಡೀ ಊರಿಗೆ ಊರೇ ಖಾಲಿಯಾಗಿ ಗುಳೇ ಹೋಗುವ ಆಚರಣೆಯ ಈ ಜಾತ್ರೆ ಬಳ್ಳಾರಿ ಜಿಲ್ಲೆಯ ಕೂಡ್ಲಿಗಿಯಲ್ಲಿ ನಡೆಯುತ್ತದೆ. ಇದನ್ನು ಗುಳೇ ಲಕ್ಕಮ್ಮನ ಜಾತ್ರೆ ಎಂದೇ ಕರೆಯುತ್ತಾರೆ. ಹೀಗಾಗಿ ಇದೊಂದು ಗುಳೇ ಹೋಗುವ ಜಾತ್ರೆ.

ಜನ, ಜಾನುವಾರುಗಳಿಗೆ ಕಾಯಿಲೆಗಳು ಬಾರದೇ ಇರಲಿ, ಊರು ಸ್ವಚ್ಛವಾಗಲಿ ಎಂಬ ಉದ್ದೇಶದೊಂದಿಗೆ ನೂರಾರು ವರ್ಷಗಳ ಹಿಂದೆ ಆರಂಭಗೊಂಡ ಈ ಆಚರಣೆ ಇಂದಿಗೂ ಚಾಲ್ತಿಯಲ್ಲಿದೆ ಎಂದು ಊರ ಹಿರಿಯರು ಹೇಳುತ್ತಾರೆ.

ಬಹುಶ: ಪ್ಲೇಗ್ ಎಂಬ ಮಾರಿ ಊರೊಳಕ್ಕೆ ಬಂದಾಗ ಊರು ಖಾಲಿ ಮಾಡಿ ಊರ ಹೊರಗಡೆ ವಾಸ ಮಾಡಿ ಕೆಲವು ದಿನಗಳ ನಂತರ ಗ್ರಾಮ ದೇವತೆಯೊಂದಿಗೆ ಊರನ್ನು ಪ್ರವೇಶಿಸುವ ಆಚರಣೆ ಇಂದಿಗೂ ಹಾಗೆಯೇ ಉಳಿದುಕೊಂಡು ಬಂದಿರುವ ಸಾಧ್ಯತೆಯಿದೆ. ಈ ಗುಳೇ ಹೋಗುವ ಆಚರಣೆಗೆ ಇರುವ ದೇವತೆಯೇ ಲಕ್ಕಮ್ಮ. ಲಕ್ಕವ್ವ ಎಂದೂ ಕರೆಯುತ್ತಾರೆ. ಬಹುಶ: ಲಕ್ಷ್ಮಿ ಎಂಬ ಪದವೇ ಲಕ್ಕಮ್ಮ, ಲಕ್ಕವ್ವ ಆಗಿರಬಹುದಾದ ಸಾಧ್ಯತೆಗಳಿವೆ.